**LAC No**: 83/2010 **R.W**:1

**ದಿನಾಂಕ :09.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ 2ನೇ ಎದುರುದಾರರ ಪರ ಶ್ರೀ. ಎಸ್.ಹೆಚ್.ಎಂ. ವಕೀಲರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

**ಪಾಟೀ ಸವಾಲು ಅರ್ಜಿದಾರರ ಪರ ಶ್ರೀ. ಕೆ.ವಿ.ಎನ್. ವಕೀಲರಿಂದಃ-**

ನಾನು 15 ವರ್ಷಗಳಿಂದ ಇಂಜಿಯರ್ ಆಗಿ ಕೆಲಸ ನಿರ್ವಹಿಸಿದ್ದು, ಕಳೆದ 6 ವರ್ಷಗಳಿಂದ ಕಾರ್ಯಪಾಲಕ ಇಂಜಿನಿಯರ್ ಎಂದು ಅಲ್ಲಿಯೇ ಮುಂಬಡ್ತಿ ಹೊಂದಿ ಕೆಲಸ ನಿರ್ವಹಿಸುತ್ತಿದ್ದೇನೆ. ಚನ್ನಾಪುರ ಗ್ರಾಮ ಹಳೇಕೋಟೆ ಹೋಬಳಿಗೆ ಸೇರುತ್ತದೆ. ಪ್ರಸ್ತುತ ಜಮೀನನ್ನು ಪುನರ್ವಸತಿ ಉದ್ದೇಶಕ್ಕಾಗಿ 2007-2008 ರಲ್ಲಿ ವಶಪಡಿಸಿಕೊಂಡಿರುತ್ತೇವೆ. ಚನ್ನಪುರ ಗ್ರಾಮದ ಹಾಸನ-ಮೈಸೂರು ರಸ್ತೆಯ ಮಧ್ಯಭಾಗದಲ್ಲಿ ಬರುತ್ತದೆ ಎಂದರೆ ಸಾಕ್ಷಿ 2 ಕಿ ಮೀ ಒಳಗಡೆ ಬರುತ್ತದೆ ಎಂದು ನುಡಿಯುತ್ತಾರೆ. ಚನ್ನಾಪುರ ಗ್ರಾಮ ವ್ಯಾಪ್ತಿಯಲ್ಲಿ ನವೋದಯ ಶಾಲೆ ಬರುತತದೆ ಎಂದರೆ ಹೌದು.

**LAC No**: 83/2010 **R.W**:1

ಹೊಳೆನರಸೀಪುರದಿಂದ ಹರದನಹಳ್ಳಿ ದೂರವಾಗುತ್ತದೆಯೋ ಅಥವಾ ಚನ್ನಾಪುರ ಗ್ರಾವು ದೂರವಾಗುತ್ತದಾ ಎಂದರೆ ಸಾಕ್ಷಿ ಹದರನಹಳ್ಳಿ ದೂರವಾಗುತತದೆ ಎಂದು ನುಡಿಯುತ್ತಾರೆ. ಹರದನಹಳ್ಳಿ ಗ್ರಾಮದ ಜಮೀನುಗಳನ್ನೂ ಸಹಾ 2007-2008 ರಲ್ಲಿ ಕಾಮಸಮುದ್ರ ಏತ ನೀರಾವರಿಗಾಗಿ ಸ್ವಾಧೀನಪಡಿಸಿಕೊಂಡಿರುತ್ತೇವೆ ಎಂದರೆಹೌದು. ಹರದನಹಳ್ಳಿ ಗ್ರಾಮದ ರೈತರು ಇದೇ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಹೆಚ್ಚಿನ ಪರಿಹಾರ ಪಡೆದುಕೊಂಡಿರುತ್ತಾರೆ ಎಂದರೆ ಹೌದು. ಕಡವಿನಕೋಟೆ ಜಮೀನು ಹಳೆಕೋಟೆ ಹೋಬಳಿಗೆ ಬರುತ್ತದೆ ಎಂದರೆ ಸಾಕ್ಷಿ ಇಲ್ಲ ಕಸಬಾ ಹೋಬಳಿಗೆ ಬರುತ್ತದೆಎಂದು ನುಡಿಯುತ್ತಾರೆ. ಕಟ್ಟೆಬೆಳಗುಲಿ ಗ್ರಾಮಕ್ಕೂ ಚನ್ನಾಪುರ ಗ್ರಾಮಕ್ಕೂ ಸುಮಾರು 5-6 ಕಿ ಮೀ ಅಂತರವಿದೆ. ಕಟ್ಟೆಬೆಳಗುಲಿ ಗ್ರಾಮ ಹಳೆಕೋಟೆ ಹೋಬಳಿಗೆ ಬರುತ್ತದೆ ಎಂದರೆ ಹೌದು. ರೈತರಿಗೆ ಹೆಚ್ಚಿನ ಪರಿಹಾರವನ್ನು ಕೊಡುವುದನ್ನು ತಪ್ಪಿಸಿಕೊಳ್ಳುವುದರ ಸಲುವಾಗಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ.ದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.